# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 06-08-2022

## ನೂತನ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 134/2022 ಕಲಂ 302, 34 ಐಪಿಸಿ ಜೊತೆ ಮತ್ತು 3(2)(5) ಎಸ್.ಸಿ & ಎಸ್.ಟಿ. (ಪ್ರಿವೇನ್ಷನ್ ಆಫ್ ಅಟ್ರಾಸಿಟಿಸ್) ಕಾಯ್ದೆ :-

ದಿನಾಂಕ 05/08/2022 ರಂದು 1030 ಗಂಟೆಗೆ ಬೀದರ ಸರ್ಕಾರಿ ಆಸ್ಪತ್ರೆಯ ಮರ್ಚರಿ ಕೋಣೆಯ ಬಳಿ ಫಿರ್ಯಾದಿಯಾದ ಜೀವನ ತಂದೆ ರಾಮದಾಸ ತುಡಮೆ, ವಯಸ್ಸು-35 ವರ್ಷ, ಜಾತಿ-ಎಸ್.ಸಿ ಮಾದಿಗ, ಉದ್ಯೋಗ-ಕೂಲಿ ಕೆಲಸ, ಸಾ-ಗಾದಗಿ ರವರು ನೀಡದರ ದೂರಿನ ಸಾರಾಂಶವೇನಂದರೇ, ದಿನಾಂಕ 04/08/2022 ರಂದು ಮಧ್ಯಾಹ್ನ 12 ಗಂಟೆಯ ಸುಮಾರಿಗೆ ಫಿರ್ಯಾದಿ ಮತ್ತು ಜೆಡಸನ್ ಮನೆಯಲ್ಲಿದ್ದಾಗ ಮಹೇಶರೆಡ್ಡಿ ಈತನು ಕಾರ ತೆಗೆದುಕೊಂಡು ಮನೆಗೆ ಬಂದು ಫಿರ್ಯಾದಿಯ ಕುರಿತು ನಿನಗೆ ಆರಾಮ ಇಲ್ಲ ಜಹಿರಾಬಾದ ರೋಡಿಗೆ ಇರುವ ದರ್ಗಾಕ್ಕೆ ತೋರಿಸಿಕೊಂಡು ಬರೋಣ ನಡೆಯಿರಿ ಎಂದಿದ್ದು ಫಿರ್ಯಾದಿಯು ನನಗೆ ಆರಾಮ ಇಲ್ಲ ಎಂದರೂ ಸಹ ನಿನಗೆ ಆರಾಮ ಮಾಡಿಸುತ್ತೇನೆ ಎಂದು ಹೇಳಿ ಇಬ್ಬರಿಗೂ ಕಾರಿನಲ್ಲಿ ಕೂಡಿಸಿಕೊಂಡಿದ್ದು ನಂತರ ರೋಡಿಗೆ ನಿಂತ್ತಿದ್ದ ರಮೇಶ ಹಲಗೆ ಮತ್ತು ದಾವಿದನಿಗೆ ಕೂಡಿಸಿಕೊಂಡು ಗಾದಗಿ ಬಿಟ್ಟು ಹಮೀಲಾಪುರ ರಿಂಗ್ ರೋಡ ಮಾರ್ಗವಾಗಿ ಜಹಿರಾಬಾದ ರೋಡಿಗೆ ಇರುವ ದರ್ಗಾದ ಬಳಿ ಹೋಗಿ ದರ್ಗಾದ ಸುತ್ತು ಹಾಕಿ ನಂತರ ಅಲ್ಲಿಂದ ಬಿಟ್ಟು ಬೀದರ ಸರ್ಕಾರಿ ಆಸ್ಪತ್ರೆಯ ಬಳಿ ಬಂದ ನಂತರ ಮಹೇಶ ರೆಡ್ಡಿ ಈತನು ಫಿರ್ಯಾದಿಗೆ ದಾವಿದ್ @ ಡೆವಿಡನನ್ನು ಕರೆದುಕೊಂಡು ಹೋಗಿ ಆತನ ಕಾಲಿಗೆ ಆದ ಗಾಯಕ್ಕೆ ಪಟ್ಟಿ ಹಾಕಿಸಿಕೊಂಡು ಬಾ ಎಂದಿದ್ದು ಆಗ ಸಮಯ ಸುಮಾರು ಮಧ್ಯಾಹ್ನ 3 ಗಂಟೆಯಾಗಿತ್ತು. ನಾನು ದಾವಿದನಿಗೆ ಆಸ್ಪತ್ರೆಯಲ್ಲಿ ಕರೆದುಕೊಂಡು ಹೋಗಿ ಅಲ್ಲಿ ಬೆಡ್ ಬೇಗ ಸಿಗಲಾರದಕ್ಕೆ ಅಲ್ಲಿಂದ ಮರಳಿ ಝುರಾಕ್ಸ ಅಂಗಡಿ ಹತ್ತಿರ ಬಂದಾಗ ಅಲ್ಲಿ ಫಿರ್ಯಾದಿ ತಮ್ಮ ಜೆಡಸನ್, ಮಹೇಶರೆಡ್ಡಿ ಮತ್ತು ರಮೇಶ ರವರುಗಳು ಕಾಣಲಾರದಕ್ಕೆ ಅಲ್ಲಿನ ಝುರಾಕ್ಸ ಅಂಗಡಿಯವರಿಗೆ ವಿಚಾರಿಸಲಾಗಿ ಅವರು ತಿಳಿಸಿದ್ದೇನಂದರೇ, ಮಹೇಶರೆಡ್ಡಿ ಮತ್ತು ರಮೇಶ ಹಲಗೆ ಎಂಬುವವರು ಕೂಡಿಕೊಂಡು ಜೆಡಸನ್ ಈತನಿಗೆ ಸರಾಯಿ ಕುಡಿಯಲು ಹಣ ಏಕೆ ಕೊಟ್ಟಿಲ್ಲ ಸೂಳೆ ಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಜೋರಾಗಿ ನೆಲಕ್ಕೆ ನೂಕಿಕೊಟ್ಟಿದ್ದರಿಂದ ಅಂಗಾತಾಗಿ ಬಿದ್ದ ತಮ್ಮನಾದ ಜೆಡಸನ್ ಈತನ ತಲೆಯ ಹಿಂದೆ ಗಾಯವಾಗಿ ಬೆಹೋಸ ಆಗಿದ್ದರಿಂದ ಅವನಿಗೆ ಚಕಿತ್ಸೆ ಕುರಿತು ಮಹೇಶರೆಡ್ಡಿ ಎನ್ನುವವರು ಕರೆದುಕೊಂಡು ಹೋಗಿರುತ್ತಾರೆ ಎಂದು ತಿಳಿಸಿದ್ದು ತಕ್ಷಣವೇ ಆಸ್ಪತ್ರೆಯಲ್ಲಿ ಹೋಗಿ ನೋಡಲಾಗಿ ಜೆಡಸನ್ ಈತನು ಗಾಯಗೊಂಡು ಬೆಹೋಸ ಆಗಿ ಬಿದಿದ್ದು ಆತನಿಗೆ ಚಕಿತ್ಸೆ ನೀಡುತಿದ್ದ ವೈದ್ಯರು ಆತನಿಗೆ ಐ,ಸಿ,ಯು ಗೆ ಶೀಫ್ಟ ಮಾಡಿದ್ದು ಚಕಿತ್ಸೆ ಕಾಲಕ್ಕೆ ಆತನು ದಿನಾಂಕ 04/08/2022 ರಂದು ರಾತ್ರಿ 21:30 ಗಂಟೆಗೆ ಮೃತಪಟ್ಟಿರುತ್ತಾನೆ. ತಮ್ಮನಾದ ಜೆಡಸನ್ ಈತನಿಗೆ ರಮೇಶ ಹಲಗೆ ಮತ್ತು ಮಹೇಶರೆಡ್ಡಿ ಎನ್ನುವವರು ಸರಾಯಿ ಕುಡಿಯಲು ಹಣ ಕೊಟ್ಟಿಲ್ಲ ಎಂಬ ಉದ್ದೇಶದಿಂದ ಒಬ್ಬರಿಗೊಬ್ಬರು ಜಗಳ ಮಾಡಿಕೊಂಡು ಅದೇ ಉದ್ದೇಶದಿಂದ ಕೊಲೆ ಮಾಡಿರುತ್ತಾರೆ ಎಂದು ಇರುವ ದೂರಿನ ಸಾರಾಂಶದ ಆಧಾರದ ಮೇಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

## ಚಿಟಗುಪ್ಪಾ ಪೊಲೀಸ ಠಾಣೆ ಅಪರಾಧ ಸಂಖ್ಯೆ-97/2022 ಕಲಂ-379 ಐಪಿಸಿ:-

ದಿನಾಂಕ: 05/08/2022 ರಂದು 1400 ಗಂಟೆಗೆ ಫಿರ್ಯಾದಿ ನರಸಪ್ಪಾ ತಂದೆ ಮಡೇಪ್ಪಾ ನರನಾಳ, ವಯ, 34 ವರ್ಷ ಜಾತಿ:ಕಬ್ಬಲಿಗ, ಸಾ/ಘಾತ್ಮಾಪೂರ ತಾ/ಚಿಟಗುಪ್ಪಾ ರವರು ನೀಡಿದ ದೂರಿನ ಸಾರಂಶವೆನೆಂದರೆ, ನಾನು 2012 ನೇ ಸಾಲಿನಲ್ಲಿ ಒಂದು ಬಜಾಜ ಡಿಸ್ಕವರಿ ಮೋಟರ ಸೈಕಲ ನಂ:ಕೆಎ-39,ಕೆ-3612 ನೇದ್ದನ್ನು ಖರಿದಿ ಮಾಡಿದ್ದು ಇವರ ಹೆಸರಿನಲ್ಲಿರುತ್ತದೆ. ಹಿಗಿರುವಾಗ ದಿನಾಂಕ:01/08/2022 ರಂದು ಮುಂಜಾನೆ 04:30 ಗಂಟೆಗೆ ನಾನು ಬಜಾಜ ಡಿಸ್ಕವರಿ ಮೋಟರ ಸೈಕಲ ನಂ:ಕೆಎ-39,ಕೆ-3612 ನೇದ್ದನ್ನು ನಮ್ಮ ಅಂಗಡಿಯ ಮುಂದೆ ನಿಲ್ಲಿಸಿ ಮನೆಗೆ ಹೋಗಿ ಬೆಳಗ್ಗೆ 06:00 ಗಂಟೆಗೆ ಬಂದು ನೋಡಲು ನನ್ನ ಬಜಾಜ ಡಿಸ್ಕವರಿ ಮೋಟರ ಸೈಕಲ ನಂ:ಕೆಎ-39,ಕೆ-3612 ನೇದ್ದನ್ನು ಕಾಣಲಿಲ್ಲಾ. ಅಲ್ಲೇ ಇದ್ದ ನಮ್ಮೂರ ಹಣಮಂತ ವಡ್ಡರ ಮತ್ತು ಸುನೀಲ ಇಟಗಾ ಹಾಗು ಬಸವರಾಜ ವಾಡೆಕರ ಎಲ್ಲರೂ ಕೂಡಿ ಹುಡುಕಾಡಿದರು ಸಿಕ್ಕಿರುವುದಿಲ್ಲ.

ಬಜಾಜ ಡಿಸ್ಕವರ ಮೋಟರ ಸೈಕಲ ನಂ:ಕೆಎ-39,ಕೆ-3612 ಅದರ ಚೆಸ್ಸಿ ನಂ:MD2A14AZ3CWC31639 ಮತ್ತು ಇಂಜಿನ ನಂ:JBZWCC94840, ನೇದರ ಅಂ.ಕಿ. ರೂ.50000 ಸಾವಿರ ಬೆಲೆಬಾಳುವುದನ್ನು ದಿನಾಂಕ: 01/08/2022 ರಂದು ಮುಂಜಾನೆ 04:30 ಗಂಟೆಯಿಂದ 06:00 ಗಂಟೆಯ ಅವಧಿಯಲ್ಲಿ ಕಳವು ಮಾಡಿಕೊಂಡು ಹೋಗಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

ಹೋಕ್ರಾಣಾ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 47/2022 ಕಲಂ 3 & 7 ಇ.ಸಿ. ಕಾಯ್ದೆ :-

ದಿನಾಂಕ: 05/08/2022 ರಂದು 1600 ಗಂಟೆಗೆ ಫಿರ್ಯಾದಿ ಶ್ರೀ ಶಿವಾನಂದ ಪಾಟೀಲ್ ಆಹಾರ ನಿರೀಕ್ಷಕರು ಕಮಲನಗರ ರವರು ನೀಡಿದ ದೂರಿನ ಸಾರಾಂಶವೆನೆಂದರೆ ವಾಹನ ಸಂಖ್ಯೆ: ಎಮ್ ಹೆಚ್-13/ಸಿಜೆ-1622 ರಲ್ಲಿ ಮಾಳೆಗಾಂವ ಮತ್ತು ಅಕ್ಕ ಪಕ್ಕದ ಗ್ರಾಮಗಳಲ್ಲಿ ಸಾರ್ವಜನಿಕರಿಂದ ಪಡಿತರ ಅಕ್ಕಿಯನ್ನು ಕಡಿಮೆ ದರದಲ್ಲಿ ಕಾಳಸಂತೆಯಲ್ಲಿ ಖರೀದಿ ಮಾಡಿ ಹೆಚ್ಚಿನ ದರದಲ್ಲಿ ಮಾರಾಟ ಮಾಡುವ ಉದ್ದೇಶದಿಂದ ಸದರಿ ವಾಹನದಲ್ಲಿ ಪಡಿತರ ಅಕ್ಕಿಯನ್ನು ಕಾಳಸಂತೆಯಲ್ಲಿ ಮಾರಾಟ ಮಾಡಲು ತೆಗೆದುಕೊಂಡು ಬರುತ್ತಿದ್ದಾರೆಂದು ಸಿಕ್ಕ ಮಾಹಿತಿಯಂತೆ ಹೊಕ್ರಾಣಾ ಪೊಲೀಸ ಠಾಣೆಯ ಅಧಿಕಾರಿ ಮತ್ತು ಸಿಬ್ಬಂದಿಯವರ ಸಹಾಯದಿಂದ ಔರಾದ (ಬಿ) ಉದಗಿರ ರೋಡ ಮಾಳೆಗಾಂವ ಕ್ರಾಸ್ ಹತ್ತಿರದ ಗುರುಜಿ ಪಬ್ಲಿಕ್ ಶಾಲೆ ಎದುರುಗಡೆ 1300 ಗಂಟೆಗೆ ದಾಳಿ ಮಾಡಿ ವಾಹನವನ್ನು ಕೈ ಮಾಡಿ ನಿಲ್ಲಿಸಿ ವಾಹನ ಮತ್ತು ವಾಹನದಲ್ಲಿದ್ದ 06 ಕ್ವಿಂಟಲ್ ಪಡಿತರ ಅಕ್ಕಿ ಅಂ:ಕಿ: 17,400/-ರೂಪಾಯಿ ನೇದ್ದನ್ನು ಜಪ್ತಿ ಮಾಡಿದ್ದು ಇರುತ್ತದೆ. ವಾಹನದಲ್ಲಿದ್ದ ವ್ಯಕ್ತಿ ಹೆಸರು ದತ್ತ ತಂದೆ ಬಾಲಾಜಿ ಸಾ: ದೇವಲವಾಡಿ ತಾ: ಉದಗಿರ (ಎಮ್ ಹೆಚ್) ಅಂತ ತಿಳಿಸಿದ್ದು ಅವನಿಗೆ ಹಿಡಿದುಕೊಂಡು ವಿಚಾರಿಸಲು ಚಾಲಕ ಧರ್ಮ ತಂದೆ ನಾಮದೇವ ಸಾ: ದೇವಲವಾಡಿ ತಾ; ಉದಗಿರ ಇವನು ತನ್ನ ವಾಹನವನ್ನು ಬಿಟ್ಟು ಓಡಿ ಹೋಗಿದ್ದು ಇರುತ್ತದೆ. ಈ ವಾಹನದ ಮಾಲೀಕ ವಿಜಯಕುಮಾರ ಪಾಟೀಲ್ ಮತ್ತು ನಾವು ಕೂಡಿ ಉದಗಿರ ನಗರದ ಬಬನ ಹೊಂಡೆವಾರ ಈತನು ಹೇಳಿದಂತೆ ಅವರ ಹಣದಿಂದ ಕಾಳಸಂತೆಯಲ್ಲಿ ಪಡಿತರ ಅಕ್ಕಿ ಖರೀದಿಸಿ ತೆಗೆದುಕೊಂಡು ಹೋಗುತ್ತಿದ್ದೇವೆ ಅಂತ ತಿಳಿಸಿರುತ್ತಾನೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.